ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ರಾಗುಟ್ಟಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 29.05.15

ಈ ವಾರದ ಮುನ್ಸೂಚನೆ (30-05-15 to 03.06.15 ವರೆಗೆ)

ನಿಯತಾಂಕಗಳು	30.05.15	31.05.15	01.06.15	02.06.15	03.06.15
ಮಳೆ (ಮಿ ಮಿ)	3	2	2	3	2
ಗರಿಷ್ಠ ಉಷ್ಣಾಂಶ(ಡಿ.ಸೆ.)	34	34	34	31	31
ಕನಿಷ್ಠ ಉಷ್ಣಾಂಶ (ಡಿ.ಸೆ.)	23	23	23	23	22
ಮೋಡ (ಪ್ರಮಾಣ)	5	7	6	7	7
ಅರ್ದ್ರತೆ ೭.೨೦ ಬೆ (ಶೇ)	77	73	76	79	78
ಅರ್ದ್ರತೆ ೨.೨೦ ಮ (ಶೇ)	36	33	39	49	52
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	5	3	3	2
ಗಾಳಿಯ ದಿಕ್ಕು (ಡಿಗ್ರಿ)	265	265	255	270	270

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಹಗುರವಾರದ ಮಳೆಯ ನಿರೀಕ್ಷೆ ಇದೆ. ದಿನದ ಗರಿಷ್ಠ ಉಷ್ಣಾಂಶವು 31–34.0°C ಮತ್ತು ಕನಿಷ್ಠ 22-23°C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 73-79% ಇದ್ದು, ಮಧ್ಯಾಹ್ನ 33-52% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 3-5 ಕಿ.ಮೀ.ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಹಗುರವಾದ ಮಳೆಯ ನಿರೀಕ್ಷೆಯಿದೆ.
- ಅಲ್ಪಾವಧಿ ಬೆಳೆ ಬಿತ್ತನೆಯನ್ನು ಮಾಡಬಹುದು.
- ಮಳೆ ಬಂದಿರುವ ಕಡೆ ಭೂಮಿಯನ್ನು ಉಳುಮೆ ಮಾಡುವುದರಿಂದ ತೇವಾಂಶವನ್ನು ಹಿಡಿದಿಡಬಹುದು ಹಾಗೂ ಮುಂದೆ ಬೆಳೆಗೆ ಬರುವ ರೋಗ ಮತ್ತು ಕೀಟ ಬಾಧೆಯನ್ನು ಕಡಿಮೆ ಮಾಡಬಹುದು.
- ಬೇಸಿಗೆ ಮಳೆಯಲ್ಲಿ ಬಹುತೇಕ ಕಡೆ ಆಲಿ ಕಲ್ಲು ಬೀಳುವ ಸಂಭವವಿರುವುದರಿಂದ ತರಕಾರಿ ಹಾಗೂ ಇನ್ನಿತರ ಬೆಳೆಗಳಿಗೆ ಸೂಕ್ತ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.

ಮೇ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗೂ ತಳಿಗಳು:

ಶಕ್ತಿಮಾನ್ ಜೋಳ: ಸಿ.ಎಸ್.ಹೆಚ್.–೫, ಸಿ.ಎಸ್.ಹೆಚ್.–೯, ಸಿ.ಎಸ್.ವಿ.–೪ **ರಾಗಿ**: ಇಂಡಾಫ್ಲ್–೨೮, ಎಮ್.ಎಲ್–೩೬೫

ಪಾಪ್‌ಕಾರ್ನ್: ಅಂಬರ್. **ಅಲಸಂದೆ**: ಟಿ.ವಿ.ಎಕ್ಸ್–೯೪೪

ಬಿತ್ತನೆಗೆ **ಬೇಕಾಗುವ** ಬೀಜಗಳನ್ನು **ಜಿ.ಕೆ.ವಿ.ಕೆಯಿಂದ ಅಥವಾ ರೈತ ಸಂಪರ್ಕ ಕೇಂದ್ರದಿಂದ ಖರೀದಿಸಿ ಇಟ್ಟುಕೊಳ್ಳಬೇಕು. ಅಲ್ಪಾವಧಿ ಬೆಳೆಗಳಾದ ಎಳ್ಳು, ಅಲಸಂದೆ, ಸಜ್ಜೆ, ಉದ್ದು, ಹೆಸರು ಬೆಳೆಗಳನ್ನು ಬೆಳೆಯಬಹುದು**

ಸಸ್ಯ ಸಂರಕ್ಷಣೆ:

ಈಗಾಗಲೇ ಬೇಸಿಗೆ ಮಳೆ ಚೆನ್ನಾಗಿ ಆಗಿರುವುದರಿಂದ, ರಸ ಹೀರುವ ಕೀಟಗಳು ಸ್ವಾಭಾವಿಕವಾಗಿ ನಿಯಂತ್ರಣಕ್ಕೆ ಬಂದಿರುತ್ತವೆ. ಸದ್ಯಕ್ಕೆ ಇನ್ನ್ಯಾವುದೇ ರಾಸಾಯನಿಕ ಕೀಟನಾಶಕಗಳನ್ನು ಉಪಯೋಗಿಸುವುದು ಸೂಕ್ತವಲ್ಲ.

ಮಾವಿನ ಬೆಳೆಯಲ್ಲಿ ಕಾಯಿಕೊರಕ ಕಂಡುಬಂದಲ್ಲಿ ಕಾರ್ಬರಿಲ್ (೪ಗ್ರಾಂ ಪ್ರತಿ ಲೀಗೆ) ಸಿಂಪಡಿಸಿ. ಚಿಬ್ಬುರೋಗಕ್ಕೆ ಕಾರ್ಬಂಡ್ಯೂಜಿಮ್ (೧ ಗ್ರಾಂ ಪ್ರತಿ ಲೀಗೆ) ಸಿಂಪಡಿಸಿ.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು